

**ಫೋಟೊ ಕ್ಲಿಕ್ಕಿಸುವ ವ್ಯಕ್ತಿ ಅಥವಾ ವಸ್ತುವಿನ ಮೇಲೆ (ಆಬ್ಜೆಕ್ಟ್) ಬೀಳುವ ನೆರಳು ಬೆಳಕಿನ ವಿನ್ಯಾಸಗಳನ್ನು ಗಮನಿಸಿ. ಆದಕ್ಕೆ ತಕ್ಕಂತೆ ಮೊಬೈಲ್ ಕ್ಯಾಮೆರಾವನ್ನು ವಿವಿಧ ಕೋನಗಳಲ್ಲಿ ಇಟ್ಟುಕೊಂಡು, ಅಪರೂಪದ ಮತ್ತು ಕಲಾತ್ಮಕ ಛಾಯಾಚಿತ್ರಗಳನ್ನು ಹೊರಾಂಗಣದಲ್ಲಿ ಕ್ಲಿಕ್ಕಿಸಬಹುದು.**



ಕಾಣುವ ಸಹಜ ಸುಂದರ ಭಾವನಾತ್ಮಕ ದೃಶ್ಯಗಳನ್ನು ವಿವಿಧ ಕೋನಗಳಲ್ಲಿ ಮೊಬೈಲ್ ಕ್ಯಾಮೆರಾ ಕಣ್ಣಿನ ಮೂಲಕ ದಾಖಲಿಸಲು ಯತ್ನಿಸಿ. ಇಂಥ ಚಿತ್ರಗಳು ಬಹುಕಾಲ ನಮಗೆ ಮಧುರ ನೆನಪಾಗಿ ಉಳಿಯುತ್ತವೆ. ಹೀಗೆ ಕ್ಲಿಕ್ಕಿಸಿದ ಚೆಂದದ ಫೋಟೊವನ್ನು ನೋಡುವಾಗ ಸಿಗುವ ಖುಷಿ ಮತ್ತು ಆಗುವ ಆತ್ಮತೃಪ್ತಿಗೆ ಬೆಲೆ ಕಟ್ಟಲಾಗುವುದಿಲ್ಲ.

## ಒಳ್ಳೇ ಚಿತ್ರ ತೆಗೆಯಲು ಪ್ರಯತ್ನ ಬೇಕು

ಮೊಬೈಲ್ ಕ್ಯಾಮೆರಾಗಳಿಂದ ಉತ್ತಮ ಫೋಟೊ ತೆಗೆಯಲು ಖಂಡಿತಾ ಸಾಧ್ಯವಿದೆ. ಆದರೆ ಈ ಸಾಧ್ಯತೆಗೆ ತನ್ನದೇ ಆದ ಮಿತಿಯೂ ಇದೆ. ಮೊಬೈಲ್‌ಗಳಲ್ಲಿ ಇರುವ ಕ್ಯಾಮೆರಾಗಳು ಎಂದಿಗೂ ಡಿಎಸ್‌ಎಲ್‌ಅರ್ ಗುಣಮಟ್ಟವನ್ನು ಸರಿಗಟ್ಟಲಾರವು. ಜೂಮ್, ಪನೋರಮಿಕ್ ಮೋಡ್ ಬಳಸುವ ಮತ್ತು ಅಪಾರ್ಚರ್, ಐಎಸ್‌ಒ ಬದಲಿಸಿಕೊಳ್ಳಲು ಕೆಲ ಕ್ಯಾಮೆರಾಗಳಲ್ಲಿ ಅವಕಾಶವಿದೆ. ಹೊರಾಂಗಣದಲ್ಲಿ ಸೂರ್ಯನ ಬೆಳಕು ಅಥವಾ ಮೋಡ ಮುಸುಕಿದ ವಾತಾವರಣವಿದ್ದರೂ ಬೆಳಕು ಚೆನ್ನಾಗಿರುವುದರಿಂದ, ಮೊಬೈಲ್ ಕ್ಯಾಮೆರಾ ಒದಗಿಸುವ ಜೂಮ್, ಅಪರ್ಚರ್, ಷಟರ್ ಬದಲಾವಣೆಯ ಅವಕಾಶಗಳನ್ನು ಬಳಸಿಕೊಂಡು ಸಹಜ ಕ್ಯಾಂಡಿಡ್ ಫೋಟೊಗಳನ್ನು ಕ್ಲಿಕ್ಕಿಸಬಹುದು.

ನೀವು ಫೋಟೊ ಕ್ಲಿಕ್ಕಿಸುವ ವ್ಯಕ್ತಿ ಅಥವಾ ವಸ್ತುವಿನ ಮೇಲೆ (ಆಬ್ಜೆಕ್ಟ್) ಬೀಳುವ ನೆರಳು ಬೆಳಕಿನ ವಿನ್ಯಾಸಗಳನ್ನು ಗಮನಿಸಿ. ಅದಕ್ಕೆ ತಕ್ಕಂತೆ ಮೊಬೈಲ್ ಕ್ಯಾಮೆರಾವನ್ನು ವಿವಿಧ ಕೋನಗಳಲ್ಲಿ ಇಟ್ಟುಕೊಂಡು, ಅಪರೂಪದ ಮತ್ತು ಕಲಾತ್ಮಕ ಛಾಯಾಚಿತ್ರಗಳನ್ನು ಹೊರಾಂಗಣದಲ್ಲಿ ಕ್ಲಿಕ್ಕಿಸಬಹುದು. ಇದೇ ರೀತಿ ಒಳಾಂಗಣದಲ್ಲಿ ಪ್ರಯತ್ನಿಸಬಹುದಾದರೂ ಮೊಬೈಲ್ ಕ್ಯಾಮೆರಾಗಳ ಮಿತಿಯಲ್ಲಿ ಅದು ಕಷ್ಟಸಾಧ್ಯ. ಅದರೂ ಅಸಾಧ್ಯವಲ್ಲ.

ಒಳಾಂಗಣದಲ್ಲಿ ಚಿತ್ರ ತೆಗೆಯುವಾಗ ಆಬ್ಜೆಕ್ಟ್ ಮೇಲೆ ಉತ್ತಮವಾದ ನೇರ ಬೆಳಕು ಬೀಳುತ್ತಿದೆಯೇ, ನೆರಳು ಬೆಳಕಿನ ವಿನ್ಯಾಸ ಕಲಾತ್ಮಕವಾಗಿದೆಯೇ ಎಂದು ಮೊದಲು ಗಮನಿಸಬೇಕು. ಉದಾಹರಣೆಗೆ, ಮನೆ, ಕಲ್ಯಾಣಮಂಟಪ, ಸಭಾಂಗಣ ಇನ್ನಿತರ ಒಳಾಂಗಣದಲ್ಲಿ ಕ್ಲಿಕ್ಕಿಸುವ ಮುನ್ನ ಅಲ್ಲಿ ಹಾಕಿರುವ ಲೈಟುಗಳ ಮೂಲಕ ಬೆಳಕು ಯಾವ ಕಡೆ ಇದೆ, ನೆರಳು ಯಾವ ಕಡೆ ಇದೆ, ಇವೆರಡೂ ಸಮತೋಲನವಾಗಿರುವ ಸ್ಥಳ ಎಲ್ಲಿದೆ, ಹೀಗೆ ಬರಿಕಣ್ಣಿನಲ್ಲಿ ಎಲ್ಲವನ್ನು ಗಮನಿಸಿ ಮನಸಿನೊಳಗೆ ಅವಲೋಕನ ಮಾಡುತ್ತಿರಬೇಕು. ನಿಮ್ಮ ಗೆಳೆಯ, ಅವರ ಕುಟುಂಬ ಇನ್ನಿತರರನ್ನು ಅವರಿಗೆ ತಿಳಿಯದಂತೆ ಗಮನಿಸಿ, ಅವರು ನಿಂತಾಗ, ಕುಂತಾಗ, ನಡೆದಾಡಿ ಮಾತಾಡುವಾಗ, ಯಾರನ್ನೋ ಗಮನಿಸುವಾಗ, ಅವರ ಮುಖದ ಮೇಲೆ ಬಿದ್ದಿರುವ ನೆರಳು–ಬೆಳಕಿನ ಹಂಚಿಕೆಯನ್ನು ನೋಡುತ್ತಾ, ಮನದಲ್ಲೇ ನಿಮ್ಮ ಮೊಬೈಲ್ ಕ್ಯಾಮೆರಾದ ಕೋನಗಳನ್ನು ಗುರುತಿಸಿಕೊಳ್ಳಬೇಕು. ಹೀಗೆ ಹೆಚ್ಚು ಹೊತ್ತು ಬರಿಕಣ್ಣಿನಿಂದ ಗಮನಿಸಿದರೆ ನಿಮ್ಮ ಮನದೊಳಗೆ ಕ್ಲಿಕ್ಕಿಸಲು ಬೇಕಾದ ಕಲಾತ್ಮಕವಾದ ಕೋನಗಳು ಮೂಡುತ್ತವೆ. ಆನಂತರ ಅದನ್ನು ನಿಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿ ಪರೀಕ್ಷಿಸಬಹುದು. ಅಲ್ಲಿ ನಿಮಗೆ ಬೇಕಾದ ಹಾಗೆ ಉತ್ತಮವಾಗಿ ನೆರಳು ಬೆಳಕಿನಲ್ಲಿ ಅವರ ಸಹಜವಾದ ಆಟಪಾಠಗಳು ಕಲಾತ್ಮಕವಾಗಿ ಕಾಣುತ್ತಿವೆಯೇ ಅಂತೆಲ್ಲ ಪರೀಕ್ಷಿಸಿಕೊಂಡು ನಿಮಗಿಷ್ಟವಾದ ಕೋನಗಳಲ್ಲಿ ಅವರ ಅದ್ಭುತವೆನಿಸುವ ಅಪರೂಪದ ಫೋಟೊಗಳನ್ನು ಸತತವಾಗಿ ಕ್ಲಿಕ್ಕಿಸಬಹುದು. ಪ್ರವಾಸ ಹೋದಾಗ ಅಥವಾ ಹೊರಾಂಗಣದಲ್ಲಿ ಉತ್ತಮ ಲ್ಯಾಂಡ್‌ಸ್ಕೇಪ್, ಪೋಟ್ರೇಟ್, ಪನಾರಮಿಕ್ ಲ್ಯಾಂಡ್‌ಸ್ಕೇಪ್‌ಗಳನ್ನು ಅಪರೂಪದ ಸನ್ನಿವೇಶಗಳ ಘಟನೆಗಳನ್ನು ಕಲಾತ್ಮಕವಾಗಿ ಕ್ಲಿಕ್ಕಿಸಿ ಸಂತೋಷಪಡಬಹುದು.

ಮೊಬೈಲ್ ಫೋಟೊಗ್ರಫಿಯನ್ನು ಸೃಜನಶೀಲತೆಯಿಂದ ಕಲಿಯಬೇಕು, ಸಾಧನೆ ಮಾಡಬೇಕು ಅಂದುಕೊಳ್ಳುವವರಿಗೆ ಇದು ಒಂದೆರಡು ದಿನಗಳಲ್ಲಿ ದಕ್ಕುವ ವಿದ್ಯೆಯಲ್ಲ ಎನ್ನುವುದು ನೆನಪಿನಲ್ಲಿರಬೇಕು. ಮೊಬೈಲಿನಲ್ಲಿ ಫೋಟೊಗ್ರಫಿ ಕಲಿತು ಯಶಸ್ವಿಯಾದವರು ಮತ್ತಷ್ಟು ಸಾಧಿಸಬೇಕೆನ್ನುವ ಆಸೆ ಉಂಟಾದರೆ ಮುಂದೆ ಡಿಎಸ್‌ಎಲ್‌ಆರ್ ಕ್ಯಾಮೆರಾಗಳಲ್ಲಿ ಕಲಿಕೆ ಮುಂದುವರಿಸಬಹುದು.

ಚಿತ್ರಗಳು ಲೇಖಕರವು

